ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

**12.01.2025** **19.35 p.m.**

**<><><><>**

ಮುಖ್ಯಾಂಶಗಳು

- ಯುವಜನತೆ ಸಾಮರ್ಥ್ಯದಿಂದ ದೇಶ ಶೀಘ್ರದಲ್ಲೇ ಅಭಿವೃದ್ಧಿ ಹೊಂದಿದ ರಾಷ್ಟ್ರ - ಪ್ರಧಾನಿ ನರೇಂದ್ರ ಮೋದಿ ವಿಶ್ವಾಸ
- ಪ್ರಯಾಗ್‌ರಾಜ್‌ನಲ್ಲಿ ನಾಳೆ ಮಹಾಕುಂಭಮೇಳ ಆರಂಭ ; ೪೫ ದಿನಗಳ ಉತ್ಸವಕ್ಕೆ ವ್ಯಾಪಕ ವ್ಯವಸ್ಥೆ
- ಪ್ರಧಾನಮಂತ್ರಿ ನಾಳೆ ಕಾಶ್ಮೀರಕ್ಕೆ ಭೇಟಿ ; ಸೋನಮಾರ್ಗ್ ಸುರಂಗ ಯೋಜನೆ ಲೋಕಾರ್ಪಣೆ
- ಮಹಿಳಾ ಕ್ರಿಕೆಟ್ : ಐರ್ಲೆಂಡ್ ವಿರುದ್ಧದ ಒಂದು ದಿನದ ಅಂತಾರಾಷ್ಟ್ರೀಯ ಪಂದ್ಯದಲ್ಲಿ ಭಾರತಕ್ಕೆ ಸರಣಿ ಜಯ

<><><><>

ಭಾರತದ ಯುವಜನತೆ ಸಾಮರ್ಥ್ಯ, ದೇಶವನ್ನು ಶೀಘ್ರದಲ್ಲೇ ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿಸಲಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಅವರು, ನವದೆಹಲಿಯ ಭಾರತ ಮಂಟಪಂನಲ್ಲಿ ವಿಕಸಿತ ಭಾರತ ಯುವ ಧುರೀಣರ ಸಂವಾದ - ೨೦೨೫ ಕಾರ್ಯಕ್ರಮದಲ್ಲಿ ಇಂದು ಪಾಲ್ಗೊಂಡು ಮಾತನಾಡಿ, ದೇಶದ ಯುವಶಕ್ತಿ ಗಮನಾರ್ಹವಾದ ರೂಪಾಂತರಗಳನ್ನು ಮುನ್ನಡೆಸುತ್ತಿದೆ ಎಂದು ಹೇಳಿದರು. ರಾಷ್ಟ್ರೀಯ ಯುವದಿನದ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಿಯವರು, ಇಂದಿನ ಹೊಸ ತಲೆಮಾರು ಹಾಗೂ ಯುವಜನತೆ, ಎಲ್ಲ ಸಮಸ್ಯೆಗಳಿಗೂ ಪರಿಹಾರವನ್ನು ಕಂಡು ಹಿಡಿಯಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಮಹತ್ವಾಕಾಂಕ್ಷೆಯ ಗುರಿಗಳನ್ನು ಸಾಧಿಸಲು ಪ್ರತಿ ಪ್ರಜೆಯ ಸಕ್ರಿಯ ಸಹಭಾಗಿತ್ವ ಅತ್ಯವಶ್ಯಕ ಎಂದರು.

**ಧ್ವನಿ : ಪ್ರಧಾನಮಂತ್ರಿ ನರೇಂದ್ರ ಮೋದಿ (೩೦ ಸೆಕೆಂಡ್ಸ್)**

ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಕಾರ್ಯತಂತ್ರಾತ್ಮಕವಾಗಿ ಸಶಕ್ತಗೊಳ್ಳುವುದೇ ಅಭಿವೃದ್ಧಿ ಹೊಂದಿದ ಸಂಕೇತವಾಗಿದೆ. ಆರ್ಥಿಕತೆ ವಿಕಸನಗೊಳ್ಳಲಿದ್ದು, ಗಳಿಸಲು ಹಾಗೂ ಕಲಿಯಲು ಅನೇಕ ಅವಕಾಶಗಳು ಇರುತ್ತವೆ ಎಂದು ಪ್ರಧಾನಿ ಹೇಳಿದರು. ಕಳೆದ ಒಂದು ದಶಕದಲ್ಲಿ ೨೫ ಕೋಟಿ ಜನರನ್ನು ಬಡತನ ರೇಖೆಯಿಂದ ಮೇಲಕ್ಕೆ ತರಲಾಗಿದೆ. ದೇಶ ೫ ಟ್ರಿಲಿಯನ್ ಡಾಲರ್ ಆರ್ಥಿಕತೆಯತ್ತ ಸಾಗುತ್ತಿದೆ. ಮುಂದಿನ ದಶಕದ ಕೊನೆಯೊಳಗೆ ಭಾರತದ ಆರ್ಥಿಕತೆ ೧೦ ಟ್ರಿಲಿಯನ್ ಡಾಲರ್ ದಾಟಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ವಿಶ್ವಾಸ ವ್ಯಕ್ತಪಡಿಸಿದರು. ಇಂದು ಇಡೀ ದೇಶ ಸ್ವಾಮೀ ವಿವೇಕಾನಂದ ಅವರಿಗೆ ಗೌರವನಮನ ಸಲ್ಲಿಸುತ್ತಿದೆ. ಸ್ವಾಮೀವಿವೇಕಾನಂದ ಅವರಿಗೆ ದೇಶದ ಯುವಜನತೆಯಲ್ಲಿ ನಂಬಿಕೆಯಿತ್ತು ಎಂದರು. ಜಗತ್ತು ಭಾರತದ ಚಂದ್ರಯಾನದ ಯಶಸ್ಸನ್ನು ಕಂಡಿದೆ. ಈಗ ದೇಶ ಗಗನಯಾನಕ್ಕೆ ಸಿದ್ದವಾಗುತ್ತಿದೆ. ೨೦೨೫ರ ವೇಳೆಗೆ ಭಾರತ ತನ್ನದೇ ಆದ ಬಾಹ್ಯಾಕಾಶ ನಿಲ್ದಾಣ ಸ್ಥಾಪಿಸಬೇಕಿದೆ ಎಂದು ಪ್ರಧಾನಿ ತಿಳಿಸಿದರು. ಯುವ ಧುರೀಣರ ಸಂವಾದದಿಂದ ದೊರೆತಿರುವ ಸಲಹೆ ಮತ್ತು ಚಿಂತನೆಗಳು ರಾಷ್ಟ್ರೀಯ ನೀತಿಯ ಭಾಗವಾಗಲಿವೆ ಎಂದು ಪ್ರಧಾನಮಂತ್ರಿ ಘೋಷಿಸಿದರು. ಒಂದು ಲಕ್ಷ ಹೊಸ ಯುವ ಜನತೆಯನ್ನು ರಾಜಕೀಯಕ್ಕೆ ತರುವ ತಮ್ಮ ಬದ್ಧತೆಯನ್ನು ಪ್ರಧಾನಮಂತ್ರಿ ಈ ಸಂದರ್ಭದಲ್ಲಿ ಪುನರುಚ್ಛರಿಸಿದರು. ವಿಕಸಿತ ಭಾರತಕ್ಕಾಗಿ ನಾವಿನ್ಯ ಪೂರ್ಣ ಪರಿಹಾರಗಳನ್ನು ಸಾದರಪಡಿಸಲು ೩ ದಿನಗಳ ಕಾಲ ನಡೆದ ವಿಕಸಿತ ಭಾರತ ಯುವ ಧುರೀಣರ ಸಂವಾದ ಕಾರ್ಯಕ್ರಮದಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಪ್ರಧಾನಮಂತ್ರಿಯವರು ದೇಶದ ವಿವಿಧ ಕಡೆಗಳಿಂದ ಆಗಮಿಸಿದ್ದ ೩ ಸಾವಿರ ಸಕ್ರಿಯ ಯುವ ಧುರೀಣರೊಂದಿಗೆ ಸಂವಾದ ನಡೆಸಿದರು. ಕಾರ್ಯಕ್ರಮದಲ್ಲಿ

೧೦ ವಿಷಯಗಳ ಬಗ್ಗೆ ಹೊರತರಲಾದ ಉತ್ತಮ ನಿಬಂಧಗಳ ಸಂಕಲನವನ್ನು ಪ್ರಧಾನಿಯವರು ಬಿಡುಗಡೆ ಮಾಡಿದರು. ಬೆಂಗಳೂರಿನ ಎಂಎಸ್ ರಾಮಯ್ಯ ಕಾಲೇಜಿನ ಬಿಕಾಂ ವಿದ್ಯಾರ್ಥಿನಿ ಸುಚಿತ್ರಾ ಗೌಡ ಇಂದು ನವೋದ್ಯಮದ ಬಗ್ಗೆ ಪ್ರಧಾನಿಯವರೊಂದಿಗಿನ ಸಂವಾದದಲ್ಲಿ ಭಾಗಿಯಾಗಿದ್ದರು. ಅವರು ಸಂವಾದ ಕುರಿತಾದ ತಮ್ಮ ಅನುಭವವನ್ನು ಆಕಾಶವಾಣಿಯೊಂದಿಗೆ ತಮ್ಮ ಅನಿಸಿಕೆಯನ್ನು ಹಂಚಿಕೊಂಡಿದ್ದಾರೆ.

**ಧ್ವನಿ : ಸುಚಿತ್ರಾ ಗೌಡ ( ೩೮ ಸೆಕೆಂಡ್ಸ್)**

ದೆಹಲಿಯಲ್ಲಿ ಇಂದು ನಡೆದ ರಾಷ್ಟ್ರೀಯ ಯುವ ಜನೋತ್ಸವದಲ್ಲಿ ಕರ್ನಾಟಕ ೨ ವಿಭಾಗಗಳಲ್ಲಿ ೨ನೇ ಸ್ಥಾನಕ್ಕೆ ಭಾಜನವಾಗಿದೆ.  ಮಂಡ್ಯ ಜಿಲ್ಲೆಯ ಡೊಳ್ಳು ಕುಣಿತ ಹಾಗೂ ಜಾನಪದ ಗೀತೆ ತಂಡಗಳು ಈ ಪ್ರಶಸ್ತಿಗೆ ಪಾತ್ರವಾಗಿವೆ. ಯುವಜನೋತ್ಸವದಲ್ಲಿ ಕರ್ನಾಟಕದಿಂದ ಸಾಂಸ್ಕೃತಿಕ ಪ್ರತಿನಿಧಿಗಳು ಹಾಗೂ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು ೭೮ ಮಂದಿ ಪಾಲ್ಗೊಂಡಿದ್ದರು. ಕರ್ನಾಟಕದ ಈ ತಂಡ ಪ್ರಧಾನಿಯವರೊಂದಿಗಿನ ಸಂವಾದದಲ್ಲಿ ಕೂಡ ಭಾಗವಹಿಸಿತು.

<><><><>

ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಾಳೆ, ಪುಷ್ಯಪೂರ್ಣಿಮೆಯಂದು ಅಮೃತಸ್ನಾನದೊಂದಿಗೆ ಮಹಾಕುಂಭಮೇಳ ಆರಂಭವಾಗಲಿದೆ. ೪೫ ದಿನಗಳ ಕಾಲ ನಡೆಯಲಿರುವ ಮಹಾಕುಂಭಮೇಳಕ್ಕಾಗಿ ಯಾತ್ರಾರ್ಥಿಗಳಿಗಾಗಿ ವ್ಯಾಪಕ ವ್ಯವಸ್ಥೆ ಮಾಡಲಾಗಿದೆ. ಮಹಾಕುಂಭದಲ್ಲಿ ಪಾಲ್ಗೊಳ್ಳಲು ದೇಶ-ವಿದೇಶಗಳಿಂದ ಈಗಾಗಲೇ ಲಕ್ಷಾಂತರ ಸಂಖ್ಯೆಯಲ್ಲಿ ಶ್ರದ್ಧಾಳುಗಳು ಪ್ರಯಾಗ್‌ರಾಜ್‌ಗೆ ಆಗಮಿಸುತ್ತಿದ್ದಾರೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ. ಶ್ರದ್ಧಾಳುಗಳ ಆರೋಗ್ಯ ರಕ್ಷಣೆ, ಅನುಕೂಲ, ಸೌಕರ್ಯ ಹಾಗೂ ಇತರ ಅಗತ್ಯಗಳಿಗಾಗಿ ವ್ಯಾಪಕ ವ್ಯವಸ್ಥೆ

ಮಾಡಲಾಗಿದೆ. ಈ ಸಂದರ್ಭದಲ್ಲಿ ದೇಶದ ಶ್ರೀಮಂತ ಸಂಸ್ಕೃತಿ ಹಾಗೂ ಪರಂಪರೆಯನ್ನು ಪ್ರತಿಬಿಂಬಿಸುವ ಅನೇಕ ಕಾರ್ಯಕ್ರಮ ಹಾಗೂ ತಾಣಗಳನ್ನು ಆಯೋಜಿಸಲಾಗಿದೆ. ನಾಗ್ವಾ ಸುಖಿ ಪ್ರದೇಶದಲ್ಲಿ ೧೦ ಎಕರೆ ಭೂಮಿಯಲ್ಲಿ ನಿರ್ಮಿಸಲಾದ ಕಲಾಗ್ರಾಮದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡಲಾಗಿದೆ. ೧೪ ಸಾವಿರಕ್ಕೂ ಹೆಚ್ಚು ಕಲಾವಿದರು ಮುಂದಿನ ೪೫ ದಿನಗಳ ಕಾಲ ಕಲಾತ್ಮಕ ಪ್ರದರ್ಶನದ ಮೂಲಕ ಸಂಸ್ಕೃತಿಯನ್ನು ಪರಿಚಯಿಸಲಿದ್ದಾರೆ. ವಿಶೇಷ ತಿಂಡಿ-ತಿನಿಸು, ಪುಸ್ತಕ ಪ್ರದರ್ಶನ, ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿದೆ. ತೀವ್ರ ಜನಸಂದಣಿ ಏರ್ಪಡುತ್ತಿರುವ ಹಿನ್ನೆಲೆಯಲ್ಲಿ ಜಪಾನ್ ಮಿಯಾ ವಾಕಿ ತಂತ್ರಜ್ಞಾನ ಬಳಸಿ ವಿವಿಧೆಡೆ ಶುದ್ಧ ಆಮ್ಲಜನಕ ಹಾಗೂ ವಾಯುಗುಣಮಟ್ಟ ಕಾಪಾಡಿಕೊಳ್ಳಲು ವ್ಯವಸ್ಥೆ ಕಲ್ಪಿಸಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ೫೫ ಸಾವಿರ ಚದುರ ಮೀಟರ್ ಜಾಗದಲ್ಲಿ ಒಂದು ಲಕ್ಷ ೨೦ ಸಾವಿರ ಸಸಿಗಳನ್ನು ನೆಡಸಲಾಗಿದ್ದು, ಹಸಿರು ವಾತಾವರಣ ನಿರ್ಮಿಸಲಾಗಿದೆ. ಕುಂಭಮೇಳ ಮುಂದಿನ ತಿಂಗಳ ೨೬ರವರೆಗೆ ನಡೆಯಲಿದೆ.

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನಾಳೆ ಕಾಶ್ಮೀರಕ್ಕೆ ಭೇಟಿ ನೀಡಲಿದ್ದು, ಸೋನಮಾರ್ಗ್ ಸುರಂಗ ಯೋಜನೆಯನ್ನು ಲೋಕಾರ್ಪಣೆ ಮಾಡಲಿದ್ದಾರೆ. ಇದೇ ಸಂದರ್ಭದಲ್ಲಿ ಪ್ರಧಾನಮಂತ್ರಿಯವರು ಸುರಂಗ ಮಾರ್ಗ ನಿರ್ಮಿಸಿದ ಕಾರ್ಮಿಕರನ್ನು ಭೇಟಿ ಮಾಡಲಿದ್ದಾರೆ. ಸುಮಾರು ೧೨ ಕಿಲೋಮೀಟರ್ ಉದ್ದದ ಈ ಸುರಂಗ ಮಾರ್ಗವನ್ನು ೨ ಸಾವಿರದ ೭೦೦ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಈ ಸುರಂಗ ಯೋಜ, ಶ್ರೀನಗರ - ಸೋನಮಾರ್ಗ್ ನಡುವೆ ಲೇಹ್ ಮೂಲಕ ಸಂಪರ್ಕ ಕಲ್ಪಿಸಲಿದೆ. ಈ ಸರ್ವಋತು ಮಾರ್ಗ, ಲಡಾಖ್ ವಲಯಕ್ಕೆ ಭೂಕುಸಿತ

ಮತ್ತು ಹಿಮಬಂಡೆ ಪಾತಕ್ಕೆ ಪರ್ಯಾಯವಾಗಿ ಸುರಕ್ಷಿತ ಸಂಚಾರ ವ್ಯವಸ್ಥೆ ಕಲ್ಪಿಸಲಿದೆ. ಪ್ರವಾಸಿಗರಿಗೆ ಹಾಗೂ ಈ ಭಾಗದ ಆರ್ಥಿಕ ಚಟುವಟಿಕೆಗಳಿಗೆ ಇದರಿಂದ ಅತ್ಯಧಿಕ ಪ್ರಯೋಜನವಾಗಲಿದೆ. ಜೋಜಿಲ್ಲಾ ಸುರಂಗ ಮಾರ್ಗದ ಕಾಮಗಾರಿಯೂ ನಡೆಯುತ್ತಿದ್ದು, ೨೦೨೮ರ ವೇಳೆಗೆ ಪೂರ್ತಿಗೊಳ್ಳುವ ನಿರೀಕ್ಷೆಯಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕಾಶ್ಮೀರ್ ಭೇಟಿ ಹಿನ್ನೆಲೆಯಲ್ಲಿ ಮಧ್ಯಕಾಶ್ಮೀರದ ಶ್ರೀನಗರ ಮತ್ತು ಗಂದೇರ್‌ಬಾಲ್ ಜಿಲ್ಲೆಗಳಲ್ಲಿ ವ್ಯಾಪಕ ಬಂದೋಬಸ್ತ್ ಮಾಡಲಾಗಿದೆ. ಮುಖ್ಯಮಂತ್ರಿ ಉಮರ್ ಅಬ್ದುಲ್ಲಾ, ಇಂದು ಉನ್ನತ ಮಟ್ಟದ ಸಭೆ ನಡೆಸಿ ಸೋನಮಾರ್ಗ್‌ದಲ್ಲಿನ ವ್ಯವಸ್ಥೆಯನ್ನು ಪರಿಶೀಲಿಸಿದರು ಎಂದು ನಮ್ಮ ಶ್ರೀನಗರ ಬಾತ್ಮೀದಾರರು ವರದಿ ಮಾಡಿದ್ದಾರೆ.

<><><>

ಕೇಂದ್ರ ಮೀನುಗಾರಿಕೆ, ಪಶುಸಂಗೋಪನೆ ಹಾಗೂ ಡೈರಿ ಖಾತೆ ಸಚಿವ ರಾಜೀವ್ ರಂಜನ್ ಸಿಂಗ್ ನಾಳೆ ಪುಣೆಯಲ್ಲಿ ಬೃಹತ್ ಉದ್ಯಮಶೀಲತಾ ಅಭಿವೃದ್ಧಿ ಸಮಾವೇಶ ಉದ್ಘಾಟಿಸಲಿದ್ದಾರೆ. ಸುಮಾರು ೫೪೫ ಕೋಟಿ ರೂಪಾಯಿ ವೆಚ್ಚದ ೪೦ ಜಾನುವಾರು ಯೋಜನೆಗಳನ್ನು ಸಚಿವರು ಉದ್ಘಾಟಿಸಲಿದ್ದಾರೆ. ಪಶುಸಂಗೋಪನೆ ಕ್ಷೇತ್ರದ ಸಾಮರ್ಥ್ಯವನ್ನು ಬಳಸಿಕೊಳ್ಳುವಂತಾಗಲು ನೀತಿ ನಿರೂಪಕರು, ಒಕ್ಕೂಟಗಳು, ಸಹಕಾರಿಗಳು, ಉದ್ಯಮಶೀಲರು, ಔದ್ಯಮಿಕ ಸಂಘಟನೆಗಳು ಹಾಗೂ ಹಣಕಾಸು ಸಂಸ್ಥೆಗಳನ್ನು ಒಂದೇ ವೇದಿಕೆಯಲ್ಲಿ ತರುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

<><><>

ಭಾರತ, ಐರ್ಲೆಂಡ್ ವಿರುದ್ಧದ ೨ನೇ ಒಂದು ದಿನದ ಅಂತಾರಾಷ್ಟ್ರೀಯ ಪಂದ್ಯವನ್ನು ಗೆದ್ದುಕೊಂಡಿದೆ. ಗುಜರಾತ್‌ನ ರಾಜ್‌ಕೋಟ್‌ನಲ್ಲಿ ಇಂದು ನಡೆದ ಪಂದ್ಯದಲ್ಲಿ ಭಾರತ, ಐರ್ಲೆಂಡ್ ಅನ್ನು ೧೧೬  ರನ್ ಗಳಿಂದ ಪರಾಭವಗೊಳಿಸುವ ಮೂಲಕ ೨-೦ ಅಂತರದಿಂದ ಸರಣಿ ಜಯ ದಾಖಲಿಸಿದೆ. ಭಾರತದ ಮಹಿಳೆಯರ ತಂಡ ನಿಗದಿತ

೫೦ ಓವರ್‌ಗಳಲ್ಲಿ ೫ ವಿಕೆಟ್ ನಷ್ಟಕ್ಕೆ ೩೭೦ ರನ್ ಗಳಿಸಿತು. ಪ್ರವಾಸಿ ಐರ್ಲೆಂಡ್ ಮಹಿಳಾ ತಂಡ ನಿಗದಿತ ಓವರ್‌ಗಳಲ್ಲಿ ೭ ವಿಕೆಟ್ ನಷ್ಟಕ್ಕೆ ೨೫೪ ರನ್ ಗಳಿಸಲಷ್ಟೇ ಶಕ್ತವಾಯಿತು. ಹರ್ಮನ್ ಪ್ರೀತ್ ಕೌರ್ ಈ ಸರಣಿಯಲ್ಲಿ ವಿಶ್ರಾಂತಿ ಪಡೆಯುತ್ತಿರುವ ಕಾರಣ ಸ್ಮೃತಿ ಮಂದಾನ ತಂಡದ ನಾಯಕತ್ವ ವಹಿಸಿದ್ದು, ೩ನೇ ಓಡಿಐ ಇದೇ ೧೫ ರಂದು ನಡೆಯಲಿದೆ.

<><><><>

ಆಸ್ಟ್ರೇಲಿಯನ್ ಓಪನ್ ಟೆನಿಸ್ ಇಂದು ಆರಂಭವಾಗಿದ್ದು, ಮೊದಲ ಸುತ್ತಿನಲ್ಲಿ ೨ ಬಾರಿ ಮಹಿಳಾ ಚಾಂಪಿಯನ್ ಅಗ್ರ ಶ್ರೇಯಾಂಕಿತೆ ಬೆಲರೂಸ್‌ನ ಅರಿನಾ ಸಬಲೆಂಕಾ- ಅಮೆರಿಕದ ಸ್ಲೋಯಾನೆ ಸ್ಟೀಫೆನ್ಸ್ ಅವರನ್ನು ಸೋಲಿಸಿ ಮುನ್ನಡೆದಿದ್ದಾರೆ. ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಸುಮಿತ್ ನಗಾಲ್ ಥಾಮಸ್ ಮ್ಯಾಖಾಕ್ ವಿರುದ್ಧ ೩-೬, ೧-೬, ೫-೭ ಅಂತರದಿಂದ ಪರಾಭವಗೊಂಡಿದ್ದು, ಪಂದ್ಯದಿಂದ ಹೊರಬಿದ್ದಿದ್ದಾರೆ.

<><><><>

ಮೊಟ್ಟಮೊದಲ ಮಹಿಳಾ ಹಾಕಿ ಇಂಡಿಯಾ ಲೀಗ್ ಪಂದ್ಯಾವಳಿ ಇಂದು ಆರಂಭವಾಗಲಿದೆ. ರಾಂಚಿಯಲ್ಲಿ ರಾತ್ರಿ ೮.೪೦ಕ್ಕೆ ನಡೆಯಲಿರುವ ಪಂದ್ಯದಲ್ಲಿ ದೆಹಲಿ ಎಸ್‌ಜಿ ಪೈಪರ್ ಮತ್ತು ಒಡಿಶಾ ವಾರೀಯರ್ ತಂಡಗಳು ಮುಖಾಮುಖಿಯಾಗಲಿವೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>